# ಶ್ರಾವಣ ದರ್ಶನ : 22ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಆ. 11 :** ಯಾರು ಇಷ್ಟಲಿಂಗ ಧ್ಯಾನಿಸುತ್ತಾರೋ ಅವರು ಅನುಸಂಧಾನ ಮಾಡುತ್ತಾರೆ. ಅದುವೇ ಲಿಂಗಾನುಸಂಧಾನ. ಶಿವಶರಣರು  ಪವಾಡ ಭಂಜಕರು. ಪವಾಡದ ಟೊಳ್ಳುಗಳನ್ನು ಬಯಲು ಮಾಡಿದವರು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಮುರುಘಾಮಠದಿಂದ ಮಂಗಳವಾರ ನಡೆದ ಶ್ರಾವಣದರ್ಶನ 22ನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಶಿವಶರಣರು ಮತ್ತು ಪವಾಡದ ಪರಿಕಲ್ಪನೆಗಳು ವಿಷಯ ಕುರಿತು ಚಿಂತನ ನೀಡಿದ ಶ್ರೀಗಳು,

ಹೊಳಹುಗಳು ಸುಲಭ ಸಾಧ್ಯವಿಲ್ಲ. ಯಾರ ಬದುಕಿನಲ್ಲಿ ಅಧ್ಯಯನ ಬಲ + ಅನುಭವ ಬಲ = ಅಧ್ಯಾತ್ಮ ಬಲ ಇರುತ್ತದೆಯೋ ಆ ವ್ಯಕ್ತಿಯನ್ನು ಉನ್ನತೀಕರಣದ ಕಡೆಗೆ ಕರೆದೊಯ್ಯುವ ದಿಸೆಯಲ್ಲಿ ಈ ಮೂರು ಬಲಗಳು ಬೇಕು. ಧನಬಲ, ಜನಬಲ ಇವು ತೋಳ್ಬಲ. ಇದು ಯಕಶ್ಚಿತ. ಆಧ್ಯಾತ್ಮಿಕತೆಯಲ್ಲಿ ಎಲ್ಲವೂ ಇದೆ. ಭೌತಿಕ ಬಲ ಮರೀಚಿಕೆಯಂತೆ ತೋರುತ್ತದೆ. ವಿಚಾರದ ಆಳಕ್ಕೆ ಇಳಿದರೆ ಶಬ್ದೋತ್ಪತ್ತಿ ಆಗುತ್ತದೆ.

ಶಿವಶರಣರು : ಇವರು ಅಪ್ರತಿಮ ಸಾಧಕರು. ಅಪೂರ್ವ ಸಾಧಕರು. ಆದರೆ ಸಮಯ ಸಾಧಕರಲ್ಲ. 12ನೇ ಶತಮಾನದಲ್ಲಿ ಅಪೂರ್ವ ಸಾಧಕರು, ಕಾಯಕವನ್ನು ಆರಾಧಿಸುವಂತಹ ಶರಣರಿದ್ದರು. ದೇವರ ದರ್ಶನ ಯಕಶ್ಚಿತ; ಅನುಭವ ದರ್ಶನ ಸರ್ವೋತ್ಕೃಷ್ಟ. ಶಿವಶರಣರು ಅನುಭವ ದರ್ಶನಕ್ಕಾಗಿ ಹಾತೊರೆದರು. ದಾಸೋಹಕ್ಕಾಗಿ ಎಲ್ಲವನ್ನೂ ಸವೆಸಿದವರು. ಅವರಿಗೆ ಅನುಭವದ ಗೀಳು ಇತ್ತು. ಶರಣರ ಅಪ್ರತಿಮ ಸಿದ್ಧಾಂತವೇ ದಾಸೋಹ. ಅಂತಸ್ತು, ಅಧಿಕಾರ, ಹಣದ ದಾಹ ಮಾನವನಲ್ಲಿದೆ. ಆದರೆ ಶರಣರು ಸೋಃ ಸೇರಿಸಿ ದಾಸೋಹ ಮಾಡಿದರು. ಪ್ರಭುದೇವರು ಹೇಳುವಂತೆ ಯಾವುದೇ ದೇವರ ಮುಂದೆ ಹೋದರೂ ಅವನು ಏನನ್ನು ಕೊಡುವುದಿಲ್ಲ. ಆದರೆ ಶಿವಶರಣರು ಕೊಡುತ್ತಾರೆ.  ಕಾಯಕದ ಮಾಟ, ಶಿವಯೋಗದ ನೋಟ, ದಾಸೋಹದ ಕೂಟ ಶಿವಶರಣರದು. ಕೂಡಿಕೊಂಡು ಅನುಭವ ದಾಸೋಹ ಮಾಡುವುದು. ದೈವತ್ವಕ್ಕಿಂತ ಶರಣತ್ವ ಶ್ರೇಷ್ಠವಾದುದು. ಶಿವನಿಗಿಂತ ಶಿವಶರಣರು ಅಧಿಕ. ಶರಣರೂಪಿ ಶಿವ, ಬಸವರೂಪಿ ಶಿವ ಕೊಡುತ್ತಾನೆ.

ನಾ ದೇವನಲ್ಲದೆ ನೀ ದೇವನೆ

ನೀ ದೇವನಾದದೆ ಎನ್ನನೇಕೆ ಸಲಹೆ?

ಆರೈದು, ಒಂದು ಕುಡಿತೆ ಉದಕವನೆರೆವೆ,

ಹಸಿದಾಗ ಒಂದು ತುತ್ತು ಓಗರವನಿಕ್ಕುವೆ,

ನಾ ದೇವ ಕಾಣಾ ಗುಹೇಶ್ವರಾ !

ಮಂದಿರದಲ್ಲಿರುವ ದೇವರಿಗೆ ದೈವತ್ವ ಬರುವುದೇ ಮಾನವನಿಂದ. ದೇವರನ್ನು ಮಾಡಿದವನು ಮಾನವನೆ. ಸಿದ್ಧರಾಮರು ಲೋಕೋಪಯೋಗಿ ಕಾರ್ಯಗಳನ್ನು ಮಾಡಿದವರು. ಮೂರು ರೀತಿಯ ಶಿವನನ್ನು ಕಾಣಬಹುದು.

ಪೌರಾಣಿಕ ಶಿವ : ಈ ಶಿವನಿಗೆ ಪುರಾಣದ ವರ್ಣನೆ ಆಧಾರ. ಅವನು ಕೈಲಾಸವಾಸಿ ಶಿವ. ಬಿಟ್ಟರೆ ಸ್ಮಶಾನ ವಾಸಿ. ಕಾರಣ ಅವನು ಲಯಕರ್ತ. ಸೃಷ್ಟಿ ಪ್ರಕ್ರಿಯೆಯಲ್ಲಿ ವಿನಾಶವು ಕೂಡ ಒಂದು. ಕಾಲ್ಪನಿಕ ಶಿವ : ಈತನಿಗೆ ನಾಲ್ಕು ಕೈಗಳು, ತಲೆಯ ಮೇಲೆ ಗಂಗೆ,

ತೊಡೆಯ ಮೇಲೆ ಪಾರ್ವತಿ. ಕೊರಳಲ್ಲಿ ನಾಗರಹಾವು. ಸೈದ್ಧಾಂತಿಕ ಶಿವ/ತಾತ್ವಿಕ ಶಿವ : ನಮಗೆ ಬೇಕಿರುವ ಶಿವ. ಈತನೇ ನಮ್ಮ ಶಿವ, ನಿಮ್ಮ ಶಿವ. ಅವನೇ ಶಿವಶರಣರ ಶಿವ. ಪುರಾಣ ಇರುವೆಡೆ ಪವಾಡ ಇರುತ್ತದೆ. ಪುರಾಣ ಮತ್ತು ಪವಾಡದ ಮಧ್ಯೆ ಅನ್ಯೋನ್ಯ ಸಂಬಂಧ ಇದೆ. ಯಾವ ಹಂತದಲ್ಲಿ ಪವಾಡ ನಡೆಯುತ್ತದೆಯೊ ಅಲ್ಲಿ ಪುರಾಣ ಇರುತ್ತದೆ.

ಭಕ್ತಿಯೆಂಬ ಪಿತ್ತ ತಲೆಗೇರಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು

ಎನ್ನ ಮನ ನಾಚಿತ್ತು, ನಾಚಿತ್ತು.

ಕೈಲಾಸವೆಂಬುದೇನೊ, ಪೃಥ್ವಿಯ ಮೇಲೊಂದು ಮರಡಿ,

ಆ ಪೃಥ್ವಿಗೆ ಲಯವುಂಟು, ಆ ಮೊರಡಿಗೆಯು ಲಯವುಂಟು

ಅಲ್ಲಿರುವ ಗಂಗೆವಾಳುಕಸಮರುದ್ರರಿಗು ಲಯವುಂಟು

ಇದು ಕಾರಣ ಬಟ್ಟ ಬಯಲು ತುತ್ತ ತುದಿಯ ಮೆಟ್ಟಿನಿಂದ

ಕೂಡಲಸಂಗಾ ನಿಮ್ಮ ಶರಣ...

ಪೃಥ್ವಿಯ ಆಚೆಗೆ ಬಟ್ಟಬಯಲ ಶರಣ ಇದ್ದಾನೆ. ಇವನೆ ನಮ್ಮ ಸೈದ್ಧಾಂತಿಕ ಶಿವ, ಶೂನ್ಯ ಶಿವ. ಬಯಲ ಶಿವನಿಗೆ ಆಕಾರವಿಲ್ಲ. ನಿರಾಕಾರ ಶಿವ. ನಾಮ ರೂಪ ಕ್ರಿಯಾತೀತ ಎಂದು ಹೇಳುತ್ತಾರೆ. ಎಲ್ಲವನ್ನೂ ಮೀರಿ ಇರುವವನು.

ಯಾರು ಇಷ್ಟಲಿಂಗ ಧ್ಯಾನಿಸುತ್ತಾರೋ ಅವರು ಅನುಸಂಧಾನ ಮಾಡುತ್ತಾರೆ. ಅದುವೇ ಲಿಂಗಾನುಸಂಧಾನ. ಶಿವಶರಣರು ಪವಾಡ ಭಂಜಕರು. ಪವಾಡದ ಟೊಳ್ಳುಗಳನ್ನು ಬಯಲು ಮಾಡಿದವರು. ಪವಾಡ ಕಾಲ್ಪನಿಕವಾಗಿರುವ ವಿದ್ಯೆ. ಕೈಚಳಕ, ಚಮತ್ಕಾರ ಮೊದಲಾಗಿ ಕರೆಯಬಹುದು. ಶೂನ್ಯದಿಂದ ಯಾವುದನ್ನೂ ಸೃಷ್ಟಿ ಮಾಡಲಾಗುವುದಿಲ್ಲ. ಬೂದಿ, ತಾಯತ, ಅಂತ್ರ, ಮಂತ್ರ, ಇವೆಲ್ಲವೂ ಪವಾಡ. ಇಂಥವರು ಮಸೀದಿ, ಮಂದಿರ, ಬೌದ್ಧ ವಿಹಾರ, ಬಸದಿಗಳಲ್ಲಿಯೂ ಕಾಲ್ಪನಿಕವಾದ ಮ್ಯಾಜಿಕ್ ಮಾಡುವವರು ಇದ್ದಾರೆ. ಇವರಾರು ಕೊರೋನಾ ವೈರಸ್‌ಗೆ ಲಸಿಕೆ ಕೊಡಲಾಗುವುದಿಲ್ಲ. ಆದರೆ ವೈದ್ಯಕೀಯ ಲೋಕ ಆದಷ್ಟು ಬೇಗನೆ ಇದಕ್ಕೆ ಲಸಿಕೆ ಕಂಡುಹಿಡಿದು ಜಗತ್ತನ್ನು ಉಳಿಸಲಿ.